

ತುಮಕೂರಿನ ಸಿದ್ಧಗಂಗೆಗೆ ಸಮೀಪದ ದೇವರಾಯಪಟ್ಟಣ ಪುಟ್ಟದೊಂದು 'ನವಿಲುಧಾಮ'ವಾಗಿ ರೂಪುಗೊಳ್ಳುತ್ತಿದೆ. ಅಲ್ಲಿನ ಕ್ವಾರಿಗಳಲ್ಲಿ ಯಂತ್ರಗಳ ಸದ್ದು ಅಡಗಿದ ನಂತರ ನಿಧಾನವಾಗಿ ನವಿಲುಗಳ ಸಂಭ್ರಮ ಅನಾವರಣಗೊಳ್ಳುತ್ತಿದೆ.

■ ಡಾ. ಸಿದ್ಧಲಿಂಗಸ್ವಾಮಿ ಹಿರೇಮಠ



ಮನುಷ್ಯ ಪ್ರಕೃತಿಯನ್ನು ಉಳಿಸಲು ಏನು ಮಾಡಬೇಕು? ಈ ಪ್ರಶ್ನೆಗೆ 'ಸುಮ್ಮನಿದ್ದರೆ ಸಾಕು' ಎನ್ನುವುದು ಉತ್ತರ. ಮನುಷ್ಯನ ಹಸ್ತಕ್ಷೇಪ ಇಲ್ಲದಿದ್ದಾಗ ಕಾಡುಗಳು ಸಮೃದ್ಧವಾಗಿ ಬೆಳೆಯುತ್ತವೆ, ನದಿಗಳು ತಿಳಿಯಾಗಿ ಹರಿಯುತ್ತವೆ. ಮನುಷ್ಯನ ಕಾರಣದಿಂದಾಗಿ ಹದಗೆಟ್ಟ ಪ್ರಕೃತಿ ಕೂಡ ಸಮಯ ಕಳೆದಂತೆ ಮತ್ತೆ ಹಸಿರು–ಉಸಿರಿನ ತಾಣವಾಗಿ ಬದಲಾಗತೊಡಗುತ್ತದೆ. ಇದಕ್ಕೆ ಉದಾಹರಣೆಯ ರೂಪದಲ್ಲಿ ತುಮಕೂರು–ದೇವರಾಯನದುರ್ಗದ ರಸ್ತೆಯ ಬಲಬದಿಗೆ ಕಾಯ್ದಿಟ್ಟ ಅರಣ್ಯ ಪ್ರದೇಶದ ಬೆಟ್ಟಗಳನ್ನು ನೋಡಬಹುದು. ಈ ಭಾಗದಲ್ಲಿ ಸರ್ಕಾರ ಕಲ್ಲು ಕ್ವಾರಿಗಳಿಗೆ ನೀಡಿದ್ದ ಅನುಮತಿಯನ್ನು ಹಿಂತೆಗೆದುಕೊಂಡ ನಂತರ ಅಲ್ಲೀಗ ನವಿಲುಗಳು ಸುಳಿದಾಡುತ್ತಿವೆ. ಅಂದರೆ, ಆ ಪ್ರದೇಶ ಮತ್ತೆ ಜೀವದುಂಬಿಕೊಳ್ಳುತ್ತಿದೆ.

ದೇವರಾಯಪಟ್ಟಣದ ಕಲ್ಬೆಟ್ಟಗಳ ಕ್ವಾರಿಗಳು ನವಿಲುಗಳ ನೆಲೆಗಳಾಗಿ ರೂಪುಗೊಳ್ಳುತ್ತಿರುವುದು ಪರಿಸರಪ್ರಿಯರ ಗಮನಸೆಳೆದಿದೆ. ಕ್ವಾರಿಗಳಲ್ಲಿ ಕೆಲಸ ನಿಂತ ನಂತರ, ಅಂತರ್ಜಲದ ಮಟ್ಟವೂ ಸುಧಾರಣೆಗೊಂಡಿದೆ. ಕ್ವಾರಿಗಳಲ್ಲಿ ಪಾರದರ್ಶಕವಾದ ಶುದ್ಧ ನೀರು ಕಾಣಿಸಿಕೊಳ್ಳುತ್ತಿದೆ. ಬಹುಶಃ ಈ ನೀರಸೆಲೆಯೂ ನವಿಲುಗಳಿಗೆ ಆಕರ್ಷಕವಾಗಿ ಕಾಣಿಸಿರಬೇಕು. ಬೆಟ್ಟಗುಡ್ಡಗಳ ಬಂಡೆಗಳ ಮೇಲೆ ವೈಯಾರ ಮಾಡುತ್ತ ನಿಲ್ಲುವ ನವಿಲುಗಳು ತಮ್ಮ ಕೋಟೆಯನ್ನು ಕಾಯುತ್ತಿರುವ ಯೋಧರಂತೆ ಕಾಣುತ್ತವೆ.

ಎತ್ತರದ ಜಾಗದಲ್ಲಿ ನಿಂತು ಫೋಟೋ ತೆಗೆಯಲು ಕ್ಯಾಮೆರಾ ಅಣಿಗೊಳಿಸಿಕೊಳ್ಳುತ್ತಿದ್ದಂತೆ, ನವಿಲುಗಳು ಬಂಡೆಗಳ ಮರೆಯಲ್ಲಿ ನಿಂತು ಇಣುಕುತ್ತಾ ಕಣ್ಣಾಮುಚ್ಚಾಲೆ ಆಡತೊಡಗಿದವು. ಈ ಆಟವನ್ನು ನೋಡಿದ ರೈತರೊಬ್ಬರು, 'ನೀವು ಹೊಸಬ್ರಲ್ರಿ, ಅದಕ್ಕ ಅಂಜ್ತ್ಯಾವು. ಸ್ವಲ್ಪ ಹೊತ್ತ ಇಲ್ಲೆ ಮರಿಗೆ ನಿಲ್ರಿ. ಹೊಲದಾಗ ಮೇಯಾಕ ಬರ್ತಾವು' ಎಂದರು. ನಾವು ಬೇಲಿಯ ಮರೆಗೆ ನಿಂತ ಸ್ವಲ್ಪ ಸಮಯಕ್ಕೆ ಒಂದೊಂದೇ ನವಿಲುಗಳು ತಮ್ಮ ತಮ್ಮ ಪೀಠಗಳತ್ತ ಬಂದವು. ಮರೆಯಲ್ಲಿ ನಿಂತೇ ಫೋಟೊಗಳನ್ನು ತೆಗೆಯತೊಡಗಿದೆ.

## ಪಿಕ್‌ನಿಕ್ ಸ್ಪಾಟ್ ಆದ ಕ್ವಾರಿ!

ದೇವರಾಯಪಟ್ಟಣ ಸಿದ್ಧಗಂಗಾ ಮಠಕ್ಕೆ ಅನತಿದೂರದಲ್ಲಿದೆ. ಇದೊಂದು ಕುಗ್ರಾಮವಾದರೂ, ಸುಂದರ ಪರಿಸರವನ್ನು ಹೊಂದಿದೆ. ಪೂರ್ವದಿಕ್ಕಿನಲ್ಲಿ ಧಾರವಾಡ ಪೇಡೆಯನ್ನು ಹೋಲುವಂತಹ ಬಂಡೆಗಳು ಹಸಿರು ಹೊದ್ದ ಗುಡ್ಡವನ್ನು ಆವರಿಸಿವೆ. ಹಲವಾರು ವರ್ಷಗಳಿಂದ ನಡೆದ ಜಲ್ಲಿಕಲ್ಲು ಗಣಿಗಾರಿಕೆಯಿಂದಾಗಿ ಗುಡ್ಡಗಳು ಗಿಣಿಗಳು ಕಚ್ಚಿತಿಂದ ಹಸಿರು ಸೀಬೆ ಹಣ್ಣಿನಂತೆ ಕಾಣಿಸುತ್ತವೆ.

ಕಳೆದ ಎರಡುಮೂರು ವರ್ಷಗಳಿಂದ ಕಲ್ಲುಕ್ವಾರಿಗಳ ಮಷಿನ್ನುಗಳ, ಕಲ್ಲನ್ನು ಸೀಳುವ ಡೈನಾಮೇಟ್‌ಗಳ ಶಬ್ದಡಗಿದೆ! ನಾಲ್ಕೈದು ಕ್ವಾರಿಗಳಲ್ಲಿ ಅಂತರ್ಜಲ ಉಕ್ಕಿದ್ದು, ನವಿಲುಗಳಿಗೆ ಶುದ್ಧ ನೀರು ಒದಗಿದೆ. ಒಂದು ಕ್ವಾರಿಯಂತೂ ಪಿಕ್‌ನಿಕ್ ಸ್ಪಾಟ್ ಆಗಿ ಬದಲಾಗಿದೆ. ಮದುವೆಗೆ ಮುನ್ನ ನಡೆಯುವ ಫೋಟೊ ಸೆಷನ್‌ಗೆ 'ಬಯಲು